**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ ಸಂಃ 95/2019**

| | | |
|---|---|---|
| ಸಾಕ್ಷಿಯ ಹೆಸರುಃ | ರಾಜು ಸಿ.ಎನ್ | ಫ್ರಾಸಾಃಃ 3 |
| ತಂದೆ ಹೆಸರುಃ | ನಾಗಣ್ಣ | ಚಾಸಾಃಃ 3 |
| ವಯಸ್ಸುಃ | 37 ವರ್ಷ | ಪ್ರಮಾಣೀಕರಿಸಿದ ದಿಃ 21/01/2025 |
| ಉದ್ಯೋಗಃ | ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಟ್ಟದಪುರ. | |
| ವಾಸ ಸ್ಥಳಃ | ಬೆಟ್ಟದಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು ದಿಃ11/09/2015 ರಿಂದ 08/12/2020 ರವರೆಗೆ ಅಬಕಾರಿ ಪೇದೆಯಾಗಿ ಅಬಕಾರಿ ನಿರೀಕ್ಷಕರ ಕಚೇರಿ, ಪಿರಿಯಾಪಟ್ಟಣ ವಲಯದಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 17/10/2017ರಂದು ಅಬಕಾರಿ ನಿರೀಕ್ಷಕರಾದ–ಚಾಸಾ–10, ಚಾಸಾ–4 ಮತ್ತು ನಾನು, ಚಾಸಾ–5 ವಾಹನ ಚಾಲಕ ರವರು ಇಲಾಖಾ ವಾಹನದಲ್ಲಿ ಪಿರಿಯಾಪಟ್ಟಣ ವಲಯ ಮಾರ್ಗ ಸಂಃ2 ರಲ್ಲಿ ಗಸ್ತು ನಡೆಸಿ, ಕೊಪ್ಪ ಗ್ರಾಮದಿಂದ ಅವರ್ತಿ ಗ್ರಾಮಕ್ಕೆ ಹೋಗುವ ರಸ್ತೆಯ ತಿರುವಿನಲ್ಲಿ ಭಾರತ್ ಮಾತ ವಿದ್ಯಾಸಂಸ್ಥೆಯ ಎದುರುಗಡೆ ಸಂಜೆ 6.00 ಗಂಟೆಗೆ ರಸ್ತೆಗಾವಲು ನಡೆಸುತ್ತಿದ್ದಾಗ, ಒಬ್ಬ ಆಸಾಮಿಯು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದು, ಆ ದ್ವಿಚಕ್ರ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ನೋಡಿದ ನಾವುಗಳು ಅನುಮಾನಗೊಂಡು

ಅಬಕಾರಿ ಪೇದೆಯಾದ ಚಾಸಾ-4 ರವರು ಆ ವಾಹನವನ್ನು ತಡೆದು ನಿಲ್ಲಿಸಿದರು. ನಂತರ ಅಲ್ಲಿ ವಾಹನವನ್ನು ಪರಿಶೀಲಿಸಲು ಅದೇ ರಸ್ತೆಯಲ್ಲಿ ಬರುತ್ತಿದ್ದ ಕೆಲವು ಜನರನ್ನು ಸಾಕ್ಷಿದಾರರನ್ನಾಗಲು ಕೇಳಲಾಗಿ ಚಾಸಾ-1 ಮತ್ತು 2 ರವರು ಒಪ್ಪಿ ಮುಂದೆ ಬಂದಿರುತ್ತಾರೆ. ನಂತರ ವಾಹನವನ್ನು ಶೋಧಿಸಲು ಮಾನ್ಯ ಘನ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯಲ ಕಾಲಾವಕಾಶ ಇಲ್ಲದ ಕಾರಣ ಅಧಿಕಾರಿಯವರು ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ, ಸಾಕ್ಷಿದಾರರ ಸಹಿ ಪಡೆದು, ಸಿಬ್ಬಂದಿಯವರು ಮತ್ತು ಸಾಕ್ಷಿದಾರರು ಪರಸ್ಪರ ಅಂಗಶೋಧಿಸಿಕೊಂಡು, ವಾಹವನನ್ನು ಪರಿಶೀಲಿಸಿದಾಗ ಅದರ ಪೆಟ್ರೋಲ್ ಟ್ಯಾಂಕ್ ಮೇಲೆ ಪ್ಲಾಸ್ಟಿಕ್ ಚೀಲದಲ್ಲಿ 180 ಎಂ.ಎಲ್.ನ 3 ಒಲ್ಡ್ ಟಾವೆರಿನ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು, 180 ಎಂ.ಎಲ್.ನ 3 ಕೋಡೇಸ್ XXX ರಮ್ ನ ಟೆಟ್ರಾ ಪ್ಯಾಕೇಟುಗಳು, 180 ಎಂ.ಎಲ್.ನ 3, 8 ಪಿಎಂ ಟೆಟ್ರಾ ಪ್ಯಾಕೇಟ್‌ಗಳು, 90 ಎಂ.ಎಲ್.ನ 3 ಕೋಡೇಸ್ ರಮ್ ನ ಟೆಟ್ರಾ ಪ್ಯಾಕೇಟ್‌ಗಳು ಮತ್ತು 90 ಎಂ.ಎಲ್.ನ 10 ಒರಿಜಿನಲ್ ಟಾವೆರಿನ್ ನ ಟೆಟ್ರಾ ಪ್ಯಾಕೇಟ್‌ಗಳು ಇರುವುದು ಕಂಡುಬಂದಿರುತ್ತವೆ. ಈ ಬಗ್ಗೆ ಆಸಾಮಿಯನ್ನು ಪ್ರಶ್ನಿಸಿದಾಗ ಯಾರು ಕೊಟ್ಟರು, ಎಲ್ಲಿಂದ ತಂದಿರಿ, ಪರವಾನಿಗೆ ಇದೆಯೇ ಎಂದು ಕೇಳಿದಾಗ ಇಲ್ಲವೆಂದು ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಕುಶಲಾನಗರದ ಕದಂಬ ವೈನ್ಸ್‌ನಿಂದ ತಂದಿರುವುದಾಗಿ, ಕೂಲಿ ಕಾರ್ಮಿಕರಿಗೆ ನೀಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ಅಧಿಕಾರಿಗಳು ಈ ರೀತಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುವುದು ಕರ್ನಾಟಕ ಅಬಕಾರಿ ಕಾಯಿದೆ ವಿರುದ್ಧ ಎಂದು ತಿಳಿಸಿರುತ್ತಾರೆ. ಆತನ ಹೆಸರು ವಿಳಾಸ ಕೇಳಿಕೊಂಡೆವು. ವಾಹನವು ಕಪ್ಪು ಮತ್ತು ಬಿಳಿ ಬಣ್ಣದ ಹೀರೋಹೊಂಡಾ, ಕೆಎ-09-ಇಕೆ-2234 ನಂಬರಿನ ವಾಹನವಾಗಿರುತ್ತದೆ. ಆಸಾಮಿಯನ್ನು ಇಲಾಖಾ ವಶಕ್ಕೆ ಪಡೆದು, ಎಲ್ಲಾ ಮಾಲುಗಳನ್ನು ವಶಪಡಿಸಿಕೊಳ್ಳಲಾಯಿತು. ವಶಪಡಿಸಿಕೊಂಡ ಎಲ್ಲಾ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯಿನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಅರಗಿನ ಸಹಾಯದಿಂದ 298 ಇಲಾಖಾ ಸೀಲನ್ನು ಹಾಕಿರುತ್ತೇವೆ.

ಸದರಿ ಮದ್ಯದ ಮೇಲೆ ಸಣ್ಣ ಚೀಟಿಗಳಲ್ಲಿ ವಿವರ ಬರೆದು ಪಂಚರ ಸಹಿ ಪಡೆದು ಅವುಗಳ ಮೇಲೆ ಅಂಟಿಸಲಾಯಿತು. ಈ ಸಂಬಂಧ ಸ್ಥಳದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ, ಮಹಜರ್ ನ್ನು ಸಂಜೆ 6.00 ರಿಂದ 7.00 ಗಂಟೆಯವರೆಗೆ ವಾಹಹದ ಹೆಡ್ ಲೈಟ್ ಸಹಾಯದಿಂದ ನಾನು ಬರೆದಿರುತ್ತೇನೆ. ಈ ಸಂಬಂಧ ನನ್ನ ಹೇಳಿಕೆ ನೀಡಿರುತ್ತೇನೆ.

3. ಸಾಕ್ಷಿಯು ನಿಪಿ-1 ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು.

4. ಆ ದಿನ ವಶಪಡಿಸಿಕೊಂಡ ಮಾಲುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ಅವುಗಳ ಪೈಕಿ ಮದ್ಯವನ್ನು ಈಗಾಗಲೇ ಮು.ಮಾ.1 ಎಂದು, ಚೀಲವನ್ನು ಮು.ಮಾ.2 ಎಂದು ಗುರುತಿಸಲಾಗಿದೆ. ಆರೋಪಿತ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ** ಶ್ರೀ ಕೆ.ಆರ್.ವಿ **ವಕೀಲರಿಂದಃ**

5. ನಿಖರವಾಗಿ ಘಟನಾ ಸ್ಥಳಕ್ಕೆ ಎಷ್ಟು ಬಿಳಿ ಬಟ್ಟೆಯ ಚೀಲವನ್ನು ತೆಗೆದುಕೊಂಡು ಹೋಗಿದ್ದೆವು ಎಂದು ಗೊತ್ತಿಲ್ಲ. ಆದರೆ ವಾಹನದಲ್ಲಿ ಯಾವಾಗಲೂ ಇಟ್ಟುಕೊಂಡಿರುತ್ತೇವೆ. ಮುದ್ದೇಮಾಲುಗಳ ಮೇಲಿರುವ ಚೀಟಿಗಳನ್ನು ಘಟನಾ ಸ್ಥಳದಲ್ಲೇ ಬರೆಯಲಾಯಿತು. ಸದರಿ ಚೀಟಿಗಳ ಮೇಲೆ ಪಂಚರ ಸಹಿ ಪಡೆದಿದ್ದೇವೆ. ಪಂಚರು ಘಟನಾ ಸ್ಥಳದ ಸ್ಥಳೀಕರಲ್ಲ. ಪಂಚರು ಬೋರೆಹೊಸಹಳ್ಳಿ ಮತ್ತು ಮಾಕನಹಳ್ಳಿ ಗ್ರಾಮಸ್ಥರು. ಪಂಚರಿಗೆ ನಾವು ಲಿಖಿತ ನೋಟೀಸು ನೀಡಿಲ್ಲ. ಕಾರಣ ಅವರು ಘಟನಾ ಸ್ಥಳದ ಪಂಚಾಗಿದ್ದರು. ಪಂಚರು ಘಟನಾ ಸ್ಥಳದ ರಸ್ತೆಯಲ್ಲಿ ಹೋಗುತ್ತಿದ್ದರು. ಸ್ಥಳೀಕರನ್ನು ಪಂಚರನ್ನಾಗಿ ಮಾಡಿ ಅವರ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ಸ್ಥಳದಲ್ಲಿ ಯಾರೂ ಇರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-10 ರವರ ಉಕ್ತಲೇಖನದಂತೆ ನಾನು ಮಹಜರ್ ಬರೆದೆ. ಘಟನಾ ಸ್ಥಳದ ಚಕ್ಕುಬಂದಿ ಗೊತ್ತು. ನಿಮಗೆ ಚಕ್ಕುಬಂದಿ ಘಟನಾ ಸ್ಥಳದಲ್ಲಿ ಯಾರು ತಿಳಿಸಿದ್ದರು ಎಂದರೆ ನಾನೇ ಸ್ವಯಂ ಆಗಿ ಹಾಜರಿದ್ದೆ ಆದ್ದರಿಂದ ಗೊತ್ತು ಎಂದು

ನುಡಿಯುತ್ತಾರೆ. ಪಂಚರನ್ನು ಬಿಟ್ಟು ಇತರರ ಬಗ್ಗೆ ಮಾಹಿತಿ ಇಲ್ಲ. ಸ್ಥಳದಲ್ಲಿ ದ್ವಿಚಕ್ರ ವಾಹನ ಯಾರಿಗೆ ಸೇರಿದ್ದು ಎಂದು ಮಾಹಿತಿ ಪಡೆದಿಲ್ಲ. ದ್ವಿ ಚಕ್ರ ವಾಹನವನ್ನು ನಾವೆಲ್ಲರೂ ಒಟ್ಟಿಗೆ ನೋಡಿದೆವು ಮತ್ತು ಒಟ್ಟಿಗೆ ಪರಿಶೀಲನೆ ಮಾಡಿ ತಪಾಸಿಸಿದೆವು. ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದ ಮೇಲೆ ಯಾವುದೇ ಬರವಣಿಗೆ ಬರೆದಿರಲಿಲ್ಲ. ಸದರಿ ಪ್ಲಾಸ್ಟಿಕ್ ಚೀಲವನ್ನು ಪೆಟ್ರೋಲ್ ಟ್ಯಾಂಕ್ ಮೇಲೆ ಇಟ್ಟಿದ್ದರು. ಘಟನಾ ಸ್ಥಳದಲ್ಲಿ ಅಂಗಡಿ ಮುಂಗಟ್ಟುಗಳು ಮತ್ತು ಮನೆಗಳು ಇವೆ ಎಂದರೆ ಸರಿಯಲ್ಲ. ಘಟನಾ  ಪೂರ್ವದಲ್ಲಿ ಆರೋಪಿತನ ಬಗ್ಗೆ ಮಾಹಿತಿ ಇರಲಿಲ್ಲ. ಕದಂಬ ವೈನ್ಸ್ ಕುಶಾಲನಗರದಿಂದ ಸದರಿ ಮದ್ಯವನ್ನು ಖರೀದಿ ಮಾಡಿದ್ದು ಎಂದು ಆರೋಪಿತ ತಿಳಿಸಿದ್ದರು. ಮಹಜರ್ ನಲ್ಲಿ ತಯಾರಿಕಾ ದಿನಾಂಕ ಮತ್ತು ಬ್ಯಾಚ್ ಸಂಖ್ಯೆ ನಮೂದಿಸಿದ್ದೇನು. ಆ ದಿನ ಎಲ್ಲೆಲ್ಲಿ ಗಸ್ತು ಮಾಡಿದ್ದೆವು ಎಂದು ನಿಖರವಾಗಿ ತಿಳಿಸಿಲ್ಲ, ಅದರೆ ಮಾರ್ಗ ಸಂಃ2 ಎಂದು ನಮೂದಿಸಿದ್ದೇವೆ. ಘಟನಾ ದಿನ ಚುನಾವಣೆಯ ಸಮಯ ಎಂದರೆ ಗೊತ್ತಿಲ್ಲ. ಘಟನಾ  ದಿನ ದ್ವಿ ಚಕ್ರ ವಾಹನವನ್ನು ತಡೆದು ನಿಲ್ಲಿಸಿಲ್ಲ ಮತ್ತು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಸ್ಥಳದಲ್ಲಿ ಬರೆದಿಲ್ಲ, ಕಚೇರಿಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಚುನಾವಣಾ ಸಂದರ್ಭವಾದ್ದರಿಂದ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಮುದ್ದೇಮಾಲುಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**